ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಗಮನಕ್ಕೆ ಬಂದಿರುತ್ತದೆ.

ಆ) ನಿಜ.

ಇ) ಚಿತ್ತಾಪುರದ ಚಿತ್ತಾಪುರ (ಪಿ) 129ನೇ ಸರ್ವೆ ನಂಬರಿನಲ್ಲಿ ಅಡಿಗಲ್ಲೂ ಮಾಡಲಾಯಿತು. ರೈಲ್ವೆ ಮೇಲು ಸೇತುವೆಯನ್ನು ರೈಲ್ವೆ ಇಲಾಖೆಯವರೇ ಮಾಡಬೇಕಿದ್ದು, ಇದಕ್ಕಾಗಿ ಅವರಿಗೆ 18.62 ಲಕ್ಷ ರೂ.ಗಳ ಠೇವಣಿಯನ್ನು ಸಹ ಮಾಡಲಾಗಿದೆ. ಪೂರ್ವಭಾವಿ ಪರಿಶೀಲನೆ ನಡೆದಿದ್ದು ರೈಲ್ವೆ ಇಲಾಖೆಯವರು ನಕ್ಷೆಗಳನ್ನು ಅಂತಿಮಗೊಳಿಸಬೇಕಾಗಿದೆ.

ಈ) ಶೀಘ್ರ ಕೆಲಸ ಪ್ರಾರಂಭಿಸಲು ರೈಲ್ವೆ ಇಲಾಖೆಯವರಿಗೆ ಒತ್ತಾಯಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4-ನ್ನು ಅಗಲಗೊಳಿಸುವುದು.

943 - ಶ್ರೀ ಎಸ್.ಷಫಿ ಅಹಮ್ಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-4ನ್ನು ನಾಲ್ಕುಪಥ ರಸ್ತೆಯನ್ನಾಗಿ ಅಗಲ ಗೊಳಿಸುವ ಕಾರ್ಯಕ್ರಮ ಯಾವ ಹಂತದಲ್ಲಿದೆ?

ಆ) ನೆಲಮಂಗಲದಿಂದ ತುಮಕೂರ್‌ವರೆಗಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಭಾರತ ಸರ್ಕಾರದ ಭೂಸಾರಿಗೆ ಮಂತ್ರಾಲಯದ ಪರಿಶೀಲನೆಯಲ್ಲಿದೆ.

ಆ) ರಾಷ್ಟ್ರೀಯ ಹೆದ್ದಾರಿ ನಂ. 4ರಲ್ಲಿ ನೆಲಮಂಗಲದಿಂದ ತುಮಕೂರುವರೆಗಿನ 45 ಕಿ.ಮೀ.ಗಳು ಉದ್ದದ ದ್ವಿಪಥ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಪರಿವರ್ತಿಸುವ ಮತ್ತು ಬಲಪಡಿಸುವ ಕೆಲಸದ ಸರ್ವೆ ಮತ್ತು ಇನ್ವೆಸ್ಟಿಗೇಷನ್ ಕಾರ್ಯ ಮುಗಿದಿದ್ದು, ಸದರಿ ಕೆಲಸವನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಸಹಾಯ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಕೇಂದ್ರ ಸರ್ಕಾರದವರು ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯು ಬ್ಯಾಂಕಿನ ಪರಿಶೀಲನೆಯಲ್ಲಿದೆ. ಒಪ್ಪಿಗೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಪರಿಷತ್ತುಗಳಿಂದ ರಸ್ತೆ ಡಾಂಬರೀಕರಣಕ್ಕೆ ಪಡೆಯಲಾದ ಹಣ.

338 - ಶ್ರೀ ಎಸ್.ಶಫಿ ಅಹಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತುಗಳಿಂದ ಪಡೆಯಲಾದ ರಸ್ತೆಗಳನ್ನು ಡಾಂಬರೀಕರಣ ಮಾಡುವ ಸಲುವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನೀಡಲಾದ ಅನುದಾನ ಎಷ್ಟು? ಹಾಗೂ ಈ ಕೆಲಸಗಳು ಯಾವಾಗ ಪ್ರಾರಂಭವಾಗುತ್ತವೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಅನುದಾನವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ. 1993 - 94ನೇ ಸಾಲಿನಿಂದ ಅಭಿವೃದ್ಧಿ ಕಾಮಗಾರಿಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವ ಪ್ರಸ್ತಾಪವಿದೆ.